ಇ) ಈ ಕಾರ್ಯಕ್ರಮಗಳನ್ನು ತಾಲ್ಲೂಕಿನಾದ್ಯಂತ ಸರ್ಕಾರ ರೂಪಿಸುವುದೇ;

ಶ್ರೀ ಎ. ನಾರಾಯಣಸ್ವಾಮಿ (ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):–

ಅ) ಇಲ್ಲ

ಆ) ಆದರೆ 2008–09 ಮತ್ತು 2009–10ನೇ ಸಾಲಿನಲ್ಲಿ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಈ ಬಗ್ಗೆ ಕಿರುಹೊತ್ತಿಗೆಗಳನ್ನು ಮತ್ತು ಕರಪತ್ರಗಳನ್ನು ಮುದ್ರಿಸಿ ಪ್ರಚಾರ ಪಡಿಸಲಾಗಿದೆ. ಕುಣಿಗಲ್ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಅಸ್ಪೃಶ್ಯತಾ ಆಚರಣೆಯು ಕಾನೂನು ರಿತ್ಯಾ ಶಿಕ್ಷಾರ್ಹ ಅಪರಾಧ ಎಂಬ ನಾಮಫಲಕಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರಚುರ ಪಡಿಸಲಾಗಿದೆ.

'ವಿಚಾರ ಸಂಕೀರ್ಣ ಮತ್ತು ಕಮ್ಮಟ' ಗಳನ್ನು ಏರ್ಪಡಿಸುವ ಬಗ್ಗೆ ತುಮಕೂರು ಜಿಲ್ಲೆಗೆ 2010–11ನೇ ಸಾಲಿನಲ್ಲಿ ಅನುದಾನವನ್ನು ದಿನಾಂಕ 02–02–2011ರಂದು ಮತ್ತು 31–03–2011ರಂದು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದ್ದು, ಪ್ರತಿಯಾಗಿ ತಾಲ್ಲೂಕುಗಳಿಗೆ ಅನುದಾನ ಬಿಡುಗಡೆ ಮಾಡುವಲ್ಲಿ ವಿಳಂಬವಾದ ಕಾರಣ 2010–11ನೇ ಸಾಲಿನಲ್ಲಿ ವಿಚಾರ ಸಂಕಿರಣ ಮತ್ತು ಕಮ್ಮಟ ಕೈಗೊಳ್ಳಲು ಆಗಿರುವುದಿಲ್ಲ.

ಇ) ಮಾನ್ಯ ಶಾಸಕರ ಕೋರಿಕೆಯ ಬಗ್ಗೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರಿಂದ ಮಾಹಿತಿ ಪಡೆದು ಪರಿಶೀಲಿಸಿ ಅದರ ಅನುಸಾರ ಕ್ರಮಕೈಗೊಳ್ಳಲು ಪರಿಶೀಲಿಸಲಾಗುವುದು.

ಪ್ರಿಮೆಟ್ರಿಕ್ ಬಾಲಕರ ವಿದ್ಯಾರ್ಥಿನಿಲಯ

215 (503) ಶ್ರೀ ವೈ. ಎನ್. ರುದ್ರೇಶ್‌ಗೌಡ (ಬೇಲೂರು):–ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೇಲೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬೇಲೂರು ಮತ್ತು ಹಳೇಬೀಡುಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪ್ರಿಮೆಟ್ರಿಕ್ ಬಾಲಕರ ವಿದ್ಯಾರ್ಥಿನಿಲಯ ಕಟ್ಟಡ ಮಂಜೂರಾಗಿರುವುದು ನಿಜವೇ;

ಆ) ಹೊಸ ಕಟ್ಟಡ ಮಂಜೂರಾಗಿದ್ದಲ್ಲಿ, ಕಟ್ಟಡದ ಕಾಮಗಾರಿಯು ಯಾವ ಹಂತದಲ್ಲಿದೆ; ಗುತ್ತಿಗೆದಾರರು ಪೂರ್ತಿ ಹಣ ಪಡೆದಿರುವುದ ನಿಜವೇ;

ಇ) ಕಟ್ಟಡ ನಿರ್ಮಾಣ ಪೂರ್ತಿಯಾಗದೇ ಪೂರ್ತಿ ಹಣ ಪಡೆದಿರುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಎ. ನಾರಾಯಣಸ್ವಾಮಿ (ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):–

ಅ) ಹೌದು

ಆ) ಬೇಲೂರು ಟೌನ್‌ನ ಬಂಟೇನಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದ ಕಟ್ಟಡ ಕಾಮಗಾರಿಯನ್ನು ರೂ. 48.84 ಲಕ್ಷಗಳ ಅಂದಾಜು ವೆಚ್ಚದಲ್ಲಿ ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಹಾಸನ ಜಿಲ್ಲೆ ರವರ ಮುಖಾಂತರ ಕೈಗೊಂಡಿದ್ದು, ಈ ಕಾಮಗಾರಿಗೆ ಸಂಬಂಧಿಸಿದಂತೆ ಗೋಡೆ ನಿರ್ಮಾಣ ಲಿಂಟಲ್ ಮಟ್ಟದವರೆಗೆ ಪೂರ್ಣಗೊಂಡಿದ್ದು, ಶೇ. 25 ರಷ್ಟು ಕಾಮಗಾರಿ ಜರುಗಿದೆ.

ಹಳೇಬೀಡಿನಲ್ಲಿ ಮೆಟ್ರಿಕ್ ಪೂರ್ವದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡದ ನಿರ್ಮಾಣ ಕಾಮಗಾರಿಯನ್ನು ರೂ. 24.79 ಲಕ್ಷಗಳ ಅಂದಾಜು ವೆಚ್ಚದಲ್ಲಿ ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಹಾಸನ ಜಿಲ್ಲೆ ರವರ ಮುಖಾಂತರ ಕೈಗೊಂಡಿದ್ದು, ಈ ಕಟ್ಟಡ ಕಾಮಗಾರಿ ಮುಗಿದಿದೆ. ವಿದ್ಯುತ್ ಸಂಪರ್ಕ, ನೀರು ಸರಬರಾಜು, ಶೌಚಾಲಯ, ಕಾಂಪೌಂಡ್ ಗೋಡೆ, ಹೊರಭಾಗದ ಪ್ಲಾಸ್ಟರಿಂಗ್ ಮತ್ತು ಕಿಟಕಿ ಬಾಗಿಲುಗಳ ಮರದ ಕೆಲಸ ಮಾತ್ರ ಬಾಕಿ ಇದೆ.

ಈ ಕಾಮಗಾರಿಗಳ ಅಂದಾಜಿನ ಮೊತ್ತವನ್ನು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಹಾಸನ ಜಿಲ್ಲೆ ರವರಿಗೆ ಪೂರ್ಣವಾಗಿ ಪಾವತಿಸಲಾಗಿದೆ.

ಇ) ಸದರಿ ಕಟ್ಟಡಗಳ ಕಾಮಗಾರಿಯನ್ನು ನಿರ್ಮಿತಿ ಕೇಂದ್ರ, ಹಾಸನ ಜಿಲ್ಲೆ ಇವರಿಗೆ ವಹಿಸಲಾಗಿತ್ತು. ನಿರ್ಮಿತಿ ಕೇಂದ್ರ, ಹಾಸನ ಜಿಲ್ಲೆಯ ಹಿಂದಿನ ಯೋಜನಾ ವ್ಯವಸ್ಥಾಪಕರಾಗಿದ್ದ ಶ್ರೀ ವಸಂತಕುಮಾರ್ ರವರು ಈ ಕಾಮಗಾರಿ ಸೇರಿದಂತೆ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಹಲವು ಕಾಮಗಾರಿಗಳನ್ನು ಪೂರ್ಣಗೊಳಿಸದೇ ಒಟ್ಟು ರೂ. 1.20 ಕೋಟಿಗಳ ಹಣವನ್ನು ದುರುಪಯೋಗಪಡಿಸಿಕೊಂಡಿದ್ದರಿಂದ ಅವರ ವಿರುದ್ಧ ಜಿಲ್ಲಾಧಿಕಾರಿಗಳು, ಹಾಸನ ಇವರು

ಸ್ಥಳೀಯ ಪೊಲೀಸ್ ಠಾಣೆ, ಹಾಸನದಲ್ಲಿ ಮೊಕದ್ದಮೆ ಸಂಖ್ಯೆ: 265/2008 ದಿನಾಂಕ 19–11–2008ರಲ್ಲಿ ದೂರು ದಾಖಲಿಸಿದ್ದು, ದಿನಾಂಕ 20–11–2008 ರಂದು ಇವರನ್ನು ಸ್ಥಳೀಯ ಪೊಲೀಸರು ದಸ್ತಗಿರಿ ಮಾಡಿ 15 ದಿನಗಳ ಕಾಲ ನ್ಯಾಯಾಂಗ ಬಂಧನದಲ್ಲಿ ಇರಿಸಿದ್ದರು. ನಂತರ ಇವರು ಜಾಮೀನು ಮೂಲಕ ಬಿಡುಗಡೆಗೊಂಡಿದ್ದು, ಸ್ಥಳೀಯ ಪೊಲೀಸರು ದಿನಾಂಕ 22–01–2011ರಂದು ಅವರ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯದಲ್ಲಿ ಈ ಪ್ರಕರಣ ವಿಚಾರಣೆಯ ಹಂತದಲ್ಲಿದೆ.

ಹೊಸ ಪೊಲೀಸ್ ಠಾಣೆ ಮಂಜೂರಾತಿ

218 (335) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ):–ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಭದ್ರಾವತಿ ಕ್ಷೇತ್ರವು ಅತಿ ಸೂಕ್ಷ್ಮ ಪ್ರದೇಶವೆಂದು ಘೋಷಿಸಲಾಗಿದ್ದು, ಹೊಸ ಪೊಲೀಸ್ ಠಾಣೆಯನ್ನು ಪ್ರಾರಂಭಿಸಲು ಪ್ರಸ್ತಾವನೆ ಕೊಟ್ಟರು ಸಹ ಇಲ್ಲಿಯವರೆವಿಗೂ ಸಹ ಕಾರ್ಯಗತವಾಗದಿರಲು ಕಾರಣಗಳೇನು; ಈ ಪೊಲೀಸ್ ಠಾಣೆಯನ್ನು ಮಂಜೂರಾತಿ ನೀಡಿ ಯಾವಾಗ ಪ್ರಾರಂಭಿಸುತ್ತೀರಾ?

ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು):–

ಶ್ರೀ ಸಂಗಮೇಶ್ವರ, ಬಿ.ಕೆ. ಶಾಸಕರು, ಭದ್ರಾವತಿ ಕ್ಷೇತ್ರರವರು ದಿನಾಂಕ 17–10–2011 ರಂದು ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆಯವರಿಗೆ ಮನವಿಯೊಂದನ್ನು ಸಲ್ಲಿಸಿ, ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕು ಕಲ್ಲಿಹಾಳ ಸರ್ಕಲ್‌ನಲ್ಲಿ ಒಂದು ಪೊಲೀಸ್ ಉಪಠಾಣೆಯನ್ನು ಮಂಜೂರು ಮಾಡಲು ಪ್ರಸ್ತಾಪಿಸಿರುತ್ತಾರೆ. ಸದರಿ ವಿಷಯವು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರ ಹಂತದಲ್ಲಿ ಪರಿಶೀಲನೆಯಲ್ಲಿದೆ. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರಿಂದ ಪ್ರಸ್ತಾವನೆಯನ್ನು ಪಡೆದು ಭದ್ರಾವತಿಯ ಕಲ್ಲಿಹಾಳ ಸರ್ಕಲ್‌ನಲ್ಲಿ ಪೊಲೀಸ್ ಠಾಣೆಯನ್ನು ತೆರೆಯುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/207/ಪಿಒಪಿ/2008, ದಿನಾಂಕ 10–02–2010 ರಲ್ಲಿ ಶಿವಮೊಗ್ಗ ಜಿಲ್ಲೆ ಭದ್ರಾವತಿ ನಗರದ ಹೊಸಮನೆ ಶಿವಾಜಿ ಸರ್ಕಲ್‌ನಲ್ಲಿ ಒಂದು ಪೊಲೀಸ್ ಠಾಣೆಯನ್ನು ತೆರೆಯಲು ಸರ್ಕಾರ ಮಂಜೂರಾತಿ ನೀಡಿದ್ದು, ಸದರಿ ಪೊಲೀಸ್ ಠಾಣೆಯು ದಿನಾಂಕ 26–08–2010 ರಿಂದ ಕಾರ್ಯ ನಿರ್ವಹಿಸುತ್ತಿದೆ.